**<u>ದಿನಾಂಕಃ 07-02-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>**

<u>ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಕೆ ವಿ ವಕೀಲರಿಂದಃ</u>

ಸರ್ವೆ ನಂಬರ್ 222 ರಲ್ಲಿ 6 ಎಕರೆ 27 ಗುಂಟೆ ಜಯಮ್ಮನ ಹೆಸರಿನಲ್ಲಿ ಇರುತ್ತದೆ. ನಾನು ಜಯಮ್ಮನ ಮನಗೆ ಸೊಸೆಯಾಗಿ ಬಂದು 20 ವರ್ಷ ಆಗಿರುತ್ತದೆ. ಜಯಮ್ಮರವರ ಹೆಸರಿನಲ್ಲಿ ಸದರಿ ಆಸ್ತಿ ಎಷ್ಟು ವರ್ಷಗಳಿಂದ ಖಾತೆ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಆಸ್ತಿ ಜಯಮ್ಮನ ಗಂಡನಿಗೆ ಅವರ ತಂದೆಯಿಂದ ಬಂದಿರುತ್ತದೆ. ಜಯಮ್ಮ ರವರ ಗಂಡನ ಹೆಸರಿಗೆ ಮೇಲೆ ಹೇಳಿದ ಆಸ್ತಿ ಬಂದ ಬಗ್ಗೆ ನಾನು ಪತ್ರವನ್ನು ನೋಡಿರುತ್ತೇನೆ. ಸದರಿ ಪತ್ರದಲ್ಲಿ ಚೆಕ್‌ಬಂದಿ ಪೂರ್ವಕ್ಕೆ ಜಯಮ್ಮ ಇವರ ಜಮೀನು ಬರುತ್ತದೆ ಅದರ ಸರ್ವೆ ನಂಬರ್ ಮತ್ತು ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ಪಶ್ಚಿಮಕ್ಕೆ ನಮಗೆ ಸೇರಿದ ಕುಷ್ಕಿ ಜಮೀನು ಬರುತ್ತದೆ. ಉತ್ತರಕ್ಕೆ ನಮಗೆ ಸೇರಿದ ಜಮೀನು ಹಾಗೂ ದಕ್ಷಿಣಕ್ಕೆ ಸರ್ಕಾರಿ ರಸ್ತೆ ಬರುತ್ತದೆ.

2. ದಕ್ಷಿಣಕ್ಕೆ ಇರುವ ಸರ್ಕಾರಿ ರಸ್ತೆ ಸರ್ವೆ ನಂಬರ್ 223 ಹಾಗೂ ಸರ್ವೆ ನಂಬರ್ 137 ರಲ್ಲಿ ಬರುತ್ತದೆ. ಮಂಜುನಾಥ ಎಂಬುವರು ನಮ್ಮ ಮನೆಯ ಪಕ್ಕದವರು ಹಾಗೂ ವಾದಿಯ ಸಂಬಂಧಿಕರು ಎಂದರೆ ಸರಿ. ಮಂಜುನಾಥ ಇವರಿಗೆ ಅವರ ಮನೆಯ ಪಕ್ಕ ಅವರ ಹಿಸ್ಸೆಗೆ ಬಂದ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಆಸ್ತಿ ವಾದಿ ಮತ್ತು ಮಂಜುನಾಥ ಇವರ ನಡುವೆ ಆದ ವಿಭಾಗ ಮುಖಾಂತರ ಬಂದಿರುತ್ತದೆ ಎಂದರೆ ಸರಿಯಲ್ಲ. ಡಾಕಮ್ಮ ಎಂಬುವರು ಯಾರು ಎಂದು ನನಗೆ ಗೊತ್ತಿರುವುದಿಲ್ಲ. ನಾನು ಡಾಕಮ್ಮ ಇವರಿಗೆ ಸಂಬಂಧಿಸಿದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಡಾಕಮ್ಮ ಇವರು 1 ನೇ ವಾದಿಗೆ ತಾಯಿಯಾಗ ಬೇಕು. ಮಂಜುನಾಥ ಇವರ ಜಮೀನು ನಮ್ಮ ಜಮೀನಿನ ಪೂರ್ವ ದಿಕ್ಕಿಗೆ ಬರುತ್ತದೆ ಆದರೆ ಅದರ ಸರ್ವೆ ನಂಬರ್ ಗೊತ್ತಿರುವುದಿಲ್ಲ. ನಮ್ಮ ಜಮೀನು ಮತ್ತು ಮಂಜುನಾಥ ಇವರ ಜಮೀನು ಅಕ್ಕ ಪಕ್ಕದಲ್ಲಿ ಇರುತ್ತದೆ ಎಂದರೆ ಸರಿ. ಸದರಿ 2 ಜಮೀನುಗಳಿಗೆ ಗಡಿ ಗುರುತು ಬದು ಇರುತ್ತದೆ. ಮಂಜುನಾಥ ಜಮೀನಿನ ಪಕ್ಕ ನಮಗೆ ಸೇರಿದ ಸರ್ವೆ ನಂಬರ್ 157 ರ ತರಿ ಜಮೀನು ಬರುತ್ತದೆ. ನಿಮ್ಮ ಆಸ್ತಿಯ ಎಷ್ಟು

ದೂರದಲ್ಲಿ ವಾದಿಯ ಜಮೀನು ಇರುತ್ತದೆ ಎಂದರೆ ಸಾಕ್ಷಿ ಕೊನೆಯಲ್ಲಿ ಇರುತ್ತದೆ ಆದರೆ ಸರ್ವೆ ನಂಬರ್ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ.

3. ನಮ್ಮ ಮಾವನವರಿಗೆ ಆದ ಪತ್ರದಲ್ಲಿ ನಮ್ಮ ಜಮೀನಿನ ಮಧ್ಯೆ ಸರ್ಕಾರಿ ರಸ್ತೆ ಹಾದು ಹೋಗುತ್ತದೆ ಎಂಬುದರ ಬಗ್ಗೆ ನಮೂದು ಇರುವುದಿಲ್ಲ. ಶೃಂಗೇರಿ-ಕಾವಡಿ ಮುಖ್ಯ ರಸ್ತೆಯಿಂದ ನಮ್ಮ ಮತ್ತು ಮಂಜುನಾಥ ಇವರ ಮನೆಗೆ ಒಂದು ಕವಲೊಡೆದ ರಸ್ತೆ ಬರುತ್ತದೆ ಎಂದರೆ ಸರಿ.ಸಾಕ್ಷಿ ಮುಂದುವರೆದು ಸರ್ವೆ ನಂಬರ್ 222 ರಲ್ಲಿ ಬರುತ್ತದೆ ಎಂದು ಉತ್ತರಿಸುತ್ತಾರೆ. ಸರ್ವೆ ನಂಬರ್ 222 ರಲ್ಲಿ ಸರ್ಕಾರಿ ರಸ್ತೆಇರುವ ಬಗ್ಗೆ ನಕಾಶೆ ಪಡೆದುಕೊಂಡಿರುತ್ತೀರ ಎಂದರೆ ಸಾಕ್ಷಿ ಸರ್ವೆ ನಂಬರ್ 223 ರಲ್ಲಿ ಸರ್ಕಾರಿ ರಸ್ತೆ ಹೋಗುವ ಬಗ್ಗೆ ನಕಾಶೆ ಕಂಡ ದಾರಿ ಇರುತ್ತದೆ ಎಂದು ಉತ್ತರಿಸುತ್ತಾರೆ. ಕಾವಡಿ ಹೋಗುವಂತ ರಸ್ತೆ ಸರ್ವೆ ನಂಬರ್ 137 ರಲ್ಲಿ ಹಾದು ನಂತರ 223 ರ ಮೂಲಕ ಹೋಗುತ್ತದೆ ಎಂದರೆ ಸರಿಯಲ್ಲ. ನಾವು ಬಿಲ್ಲುಗದ್ದೆಯಲ್ಲಿ ಒಟ್ಟು ಎಷ್ಟು ಸರ್ಕಾರಿ ಜಮೀನಿಗೆ ಬೇಲಿ ಹಾಕಿರುತ್ತೀರಿ ಎಂದರೆ ಸಾಕ್ಷಿ ನಾವು ಹಾಕಿರವುದಿಲ್ಲ ನಮ್ಮ ಮಾವ ಹಾಕಿರುತ್ತಾರೆ ಎಂದು ಉತ್ತರಿಸುತ್ತಾರೆ.

4. ಕಾವಡಿಗೆ ಹೋಗುವ ಕವಲೊಡೆದ ರಸ್ತೆಯು ಬಲ ಭಾಗಕ್ಕೆ ಮೀಸಲು ಅರಣ್ಯ ಪ್ರದೇಶಕ್ಕೆ ಸೇರಿದ ಜಾಗ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ ಆದರೆ ಅದು ನಮ್ಮ ಜಾಗ ಎಂದು ಹೇಳಿತ್ತೀವಿ ಎಂದರೆ ಸರಿ. ಸದರಿ ಜಾಗಕ್ಕೆ ನಾನು ಬೇಲಿಯನ್ನು ಹಾಕಿರುವುದಿಲ್ಲ ಆದರೆ ಟ್ರಂಚ್ ತೆಗೆಯಲಾಗಿರುತ್ತದೆ. ಸದರಿ ಜಾಗ ಯಾರ ಸ್ವಾಧೀನದಲ್ಲಿ ಇತ್ತು ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ಉತ್ತರಿಸುತ್ತಾರೆ.

5. ಕಾವಡಿ ಮುಖ್ಯ ರಸ್ತೆಯ ಎಡ ಭಾಗದಲ್ಲಿ ವಾದಿಯ ಮನೆ ಇರುತ್ತದೆಯೇ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಮನೆಗೆ ವಾದಿ ರಸ್ತೆ ಅಭಿಮುಖವಾಗಿ ವಾಸ ಇರುತ್ತಾರೆ ಎಂದರೆ ಸಾಕ್ಷಿ ಅವರು ಶೃಂಗೇರಿಯಲ್ಲಿ ವಾಸ ಇರುತ್ತಾರೆ ಎಂದು ಉತ್ತರಿಸುತ್ತಾರೆ. ನಾವು ಸದರಿ ರಸ್ತೆಗೆ ಅಡ್ಡಲಾಗಿ ಹಾಕಿದ ಬೇಲಿಯನ್ನು ತಹಶೀಲ್ದಾರ ರವರು ತೆಗೆಸಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಹಾಜರುಪಡಿಸಿರುವ ದಾಖಲೆಗಳನ್ನು ನಾನು ನೋಡಿರುತ್ತೇನೆ. ಸದರಿ ಸರ್ವೆ ನಂಬರ್ 137 ರಿಂದ 223 ರ ವರಗೆ ಸದರಿ ರಸ್ತೆ ಮಂಜುನಾಥ ಇವರ ಜಮೀನಿನ ವರೆಗೆ ಹಾದು ಹೋಗಿರತ್ತದೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ನೋಡಿರುವುದಿಲ್ಲ. ಸಾಕ್ಷಿಗೆ ನಿಪಿ- 12 ನ್ನು

ತೋರಿಸಲಾಗಿ ನಿಪಿ- 12 ರ ಮನೆಯ ಮುಂದಗಡೆ ರಸ್ತೆ ನಮ್ಮ ಮನೆಗೆ ಹಾದು ಹೋಗುತ್ತದೆ ಎಂದರೆ ಸರಿ. ನಿಪಿ- 12 ರ ಫೋಟೋದಲ್ಲಿ ಬೇಲಿಯ ಒಳ ಭಾಗದಲ್ಲಿ ನಮ್ಮ ವಾಸ ಮನೆ ಇರುತ್ತದೆ ಎಂದರೆ ಸರಿ. ನಿಪಿ- 12 ರಲ್ಲಿ ಸರ್ಕಾರಿ ರಸ್ತೆಯ ಇನ್ನೊಂದು ಬದಿಯಲ್ಲಿ ಮನೆಗೆ ಹಾದು ಹೋಗುವ ರಸ್ತೆ ಇರುತ್ತದೆ ಎಂದರೆ ಸರಿ. ನಿಪಿ- 9 ರ ಎಡ ಭಾಗದಲ್ಲಿ ಕಾಣುವ ಜಾಗ ನಮ್ಮ ಜಾಗ ಸರ್ವೆ ನಂಬರ್ 222 ರಲ್ಲಿ ಇರುತ್ತದೆ. ನಮ್ಮ ಮನೆಯ ಎಡಭಾಗದಲ್ಲಿ ಇರುವ ಜಾಗ ಎಷ್ಟು ಎಕರೆ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ರಸ್ತೆಯ ಎಡ ಭಾಗದಲ್ಲಿರುವ ಜಾಗವನ್ನು ಮಂಜೂರು ಮಾಡಿ ಕೊಡಬೇಕೆಂದು ಕೊಪ್ಪ ತಾಹಶೀಲ್ದಾರರವರಿಗೆ ನನ್ನ ಅತ್ತೆ ಅರ್ಜಿ ಕೊಟ್ಟಿರುತ್ತಾರೆ. ಸಾಕ್ಷಿ ನಮ್ಮ ಮನೆ ಸರ್ವೆ ನಂಬರ್ 222 ಮತ್ತು 223 ರಲ್ಲಿ ಬರುತ್ತದೆ ಎಂದು ಉತ್ತರಿಸುತ್ತಾರೆ. ನಮ್ಮ ಅತ್ತೆಯ ಅರ್ಜಿಯ ಆಧಾರದ ಮೇಲೆ ತಹಶೀಲ್ದಾರರವರು ಜಾಗವನ್ನು ಮಂಜೂರು ಮಾಡಿರುವುದಿಲ್ಲ.

6.ನಮ್ಮ ಮನೆ ಎಡ ಬಾಗದಲ್ಲಿ ಕಾಫಿ, ಅಡಿಕೆ ಮತ್ತು ಬಾಳೆ ಬೆಳೆ ಇರುತ್ತದೆ. ನಮ್ಮ ಮನೆಯಿಂದ ಮುಂದೆ ಮಂಜುನಾಥ ರವರ ಮನಗೆ ಹಾದು ಹೋಗುತ್ತದೆ ಎಂದೆ ಸಾಕ್ಷಿ ಅಲ್ಲಿ ಮಂಜುನಾಥ ಮನೆ ಇರುವುದಿಲ್ಲ ಸದರಿ ರಸ್ತೆ ನಮ್ಮಮನೆಯ ವರಗೆ ಮಾತ್ರ ಇರುತ್ತದೆ ಎಂದು ಉತ್ತರಿಸುತ್ತಾರೆ. ನಾವುಸದರಿ ರಸ್ತೆಯಲ್ಲಿ ಓಡಾಡ ಬಾರದು ಎಂದು ನಾವು ತಂತಿಯನ್ನು ಕಟ್ಟಿರುತ್ತೇವೆ. ಸಾಕ್ಷಿ ನಾವು ಹೈ ಪೆ,ನ್ಸ್ ಕಟ್ಟಿರುತ್ತೇವೆ ಎಂದು ಉತ್ತರಿಸುತ್ತಾರೆ. ವಾದಿ ಸದರಿ ರಸ್ತೆಯಲ್ಲಿತಮಗೆ ಓಡಾಡಲು ತೊಂದರೆ ಆಗುತ್ತದೆ ಎಂದು ಹರಿಹರಪುರ ಪೊಲೀಸ್ ಠಾಣೆ , ಮೆಸ್ಕಾಂ ಅಧಿಕಾರಿಗಳಿಗೆ ಹಾಗೂ ತಹಶೀಲ್ದಾರ್ ರವರಿಗೆ ಅರ್ಜಿ ಕೊಟ್ಟಿದ್ದರು ಎಂದರೆ ಸರಿ.

7. ಸರ್ವೆ ನಂಬರ್ 223 ರಲ್ಲಿ ತಮಗೆ ಓಡಾಡಲು ರಸ್ತೆ ಬಿಡಿಸಿಕೊಡುವಂತೆ ವಾದಿ ತಹಶೀಲ್ದಾರ್ ರವರಿಗೆ ಅರ್ಜಿ ಕೊಟ್ಟಿದ್ದರು ಎಂದರೆ ಸಾಕ್ಷಿ ನಕಾಶೆಯಲ್ಲಿ ಕಂಡಂತೆ ರಸ್ತೆ ಇತ್ತು ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ನಿಪಿ- 83 ನ್ನು ತೋರಿಸಲಾಗಿ ನೀವು ಸರ್ಕಾರಿ ರಸ್ತೆಗೆ ಅಡ್ಡಲಾಗಿ ಗೇಟು ನಿರ್ಮಿಸಿರುತ್ತೀರಿ ಎಂದರೆ ಸಾಕ್ಷಿ ಅದು ನಮ್ಮ ಮನೆಯ ಗೇಟು ಎಂದು ಉತ್ತರಿಸುತ್ತಾರೆ. ಸದರಿ ಗೇಟಿನ ಅಕ್ಕ ಪಕ್ಕದಲ್ಲಿ ನಮಗೆ ಸೇರಿದ ಬೇಲಿ ಇರುತ್ತದೆ ಎಂದರೆ ಸರಿ. ಸದರಿ ಗೇಟಿನಿಂದ ಮುಂದೆ ರಸ್ತೆ ಇರುತ್ತದೆ ಎಂದರ ಸಾಕ್ಷಿ ಅಲ್ಲಿಯವರೆಗೆ ಮಾತ್ರ ರಸ್ತೆ

ಇರುತ್ತದೆ ಮುಂದೆ ನಮ್ಮ ತೋಟ ಇರುತ್ತದೆ ಎಂದು ಉತ್ತರಿಸುತ್ತಾರೆ. ನ್ಯಾಯಾಲಯದಲ್ಲಿ ರಸ್ತೆಯಲ್ಲಿ ಓಡಾಡಲು ವಾದಿಯು ಪೊಲೀಸು ರಕ್ಷಣೆ ನೀಡಿತ್ತು ಎಂದರೆ ಸಾಕ್ಷಿ ಸರ್ವೆ ನಂಬರ್ 223 ರ ಕ್ಕೆ ರಕ್ಷಣೆ ನೀಡಿತ್ತು ಆದರೆ ಆತ ಸರ್ವೆ ನಂಬರ್ 222 ಕ್ಕೆ ಬಂದಿರುತ್ತಾರೆ ಎಂದು ಉತ್ತರಿಸುತ್ತಾರೆ. ಸರ್ವೆ ನಬಂರ್ 222 ರ ರಸ್ತೆಯಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಆ ದಿನ ಪೊಲೀಸ್ ನವರು ಸದರಿ ಗೇಟ್ ನ ಮುಖಾಂತರ ವಾದಿ ತಮ್ಮ ಜಮೀನಿಗೆ ಹೋಗಲು ಅವಕಾಶ ನೀಡಿಲ್ಲ ಎಂದರೆ ಸರಿ. ನಂತರ ಕೊಪ್ಪ ಡಿ ವೈ ಎಸ್ ಪಿ ರವರ ಮುಖಾಂತರ ವಾದಿಗೆ ನನ್ನ ಜಮೀನಿಗೆ ಹೋಗಲು ರಕ್ಷಣೆ ನೀಡುವಂತೆ ಆದೇಶ ಆಗಿತ್ತು ಎಂದರೆ ಸಾಕ್ಷಿ ಸರ್ವೆ ನಂಬರ್ 223 ಕ್ಕೆ ಆಗಿತ್ತು ಎಂದು ಉತ್ತರಿಸುತ್ತಾರೆ. ಸದರಿ ಗೇಟನ್ನು ದಾಟಿ ವಾದಿ ತನ್ನ ಜಮೀನನ್ನು ಸಾಗುವಳಿ ಮಾಡುಲು ಕೊಪ್ಪ ಡಿ ವೈ ಎಸ್ ಪಿ ರಕ್ಷಣೆ ನೀಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ಆ ದಿನ ನಾನು ಒಬ್ಬಳೆ ಇದ್ದೆ ಎಂದು ಉತ್ತರಿಸುತ್ತಾರೆ.

8. ನಾವು ನ್ಯಾಯಾಲಯಕ್ಕೆ ಸದರಿ ರಸ್ತೆಯಲ್ಲಿ ಓಡಾಡಲು ತೊಂದರೆ ಕೊಡುವುದಿಲ್ಲ ಆದರೆ ಜೆ ಸಿ ಬಿ ತೆಗೆದುಕೊಂಡು ಹೋಗುವಂತಿಲ್ಲ ಎಂದು ಪ್ರಮಾಣ ಪತ್ರ ಸಲ್ಲಿಸಿರುತ್ತೇವೆ ಎಂದರೆ ಸಾಕ್ಷಿ ನಾವು ಸರ್ವೆ ನಂಬರ್ 222 ರಲ್ಲಿ ನಮ್ಮ ಜಾಗ ಇದ್ದು ಅಲ್ಲಿ ಓಡಾಡಬೇಡಿ ಎಂದು ಹೇಳಿರುತ್ತೇವೆ. ಆ ದಿನ ತಾಲ್ಲೂಕು ಸರ್ವೆಯರ್ ಸ್ಥಳಕ್ಕೆ ಬಂದು ಸದರಿ ರಸ್ತೆ ಸರ್ಕಾರಿ ರಸ್ತೆಯಲ್ಲಿ ಬರುತ್ತದೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ.

<u>ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು .</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ